**2 ನೇ ಆಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಳ್ಳಾರಿ**

**ಸತ್ರ ಮೊಕದ್ದಮೆ ಸಂಖ್ಯೆ: 47/2024**

ಪಿ.ಡಬ್ಲುಃ 08 ಸಿಡಬ್ಲುಃ11

| | | |
|---|---|---|
| ಸಾಕ್ಷಿಯ ಹೆಸರು | : | ದಾದಾ ಕಲಂದರ್ |
| ತಂದೆಯ ಹೆಸರು | : | ಜಾಕೀರ್ |
| ವಯಸ್ಸು | : | 19 ವರ್ಷಗಳು |
| ವೃತ್ತಿ | : | ವಿದ್ಯಾರ್ಥಿ |
| ವಾಸಸ್ಥಳ | : | ಬಳ್ಳಾರಿ. |

ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ 06.02.2026.

ಮುಖ್ಯ ವಿಚಾರಣೆ ಮಾನ್ಯ ಸಾರ್ವಜನಿಕ ಅಭಿಯೋಜಕರಿಂದಃ-

1) ಹಾಜರಿರುವ 1 ರಿಂದ 5 ನೇ ಆರೋಪಿತರ ಪರಿಚಯವಿದೆ. ಅವರು ನಮ್ಮ ಊರಿನವರು. ಆದ್ದರಿಂದ ಅವರ ಪರಿಚಯವಿದೆ. ನನಗೆ ಚಾಸಾ.1 ಇವರ ಪರಿಚಯವಿದೆ. ಚಾಸಾ.14 ಇವರು ಚಾಸಾ.1 ಇವರ ಮಗ. ನಾನು ಪಾರ್ವತಿ ಇವಳನ್ನು ನೋಡಿಲ್ಲ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ. ಆರೋಪಿತರು ಪಾರ್ವತಿ ಇವಳನ್ನು ಕರೆದುಕೊಂಡು ಹೋಗಿದ್ದನ್ನು ನಾನು ನೋಡಿಲ್ಲ. ಆ ಬಗ್ಗೆ ನನಗೆ ಚಾಸಾ.1 ಇವರಿಗೆ ಯಾವುದೇ ಮಾಹಿತಿಯನ್ನು ನೀಡಿಲ್ಲ. ಆ ಬಗ್ಗೆ ನಾನು ಪೋಲೀಸರಿಗೆ ಹೇಳಿಕೆಯನ್ನು ನೀಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿರುತ್ತಾರೆ. ಅವರ ವಾದವನ್ನು ಕೇಳಿ, ಸಾಕ್ಷಿಯ ಹೇಳಿಕೆಯನ್ನು ಹಾಗೂ ಮುಖ್ಯ ವಿಚಾರಣೆಯನ್ನು ಪರಿಶೀಲನೆ ಮಾಡಿ, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಸರ್ಕಾರಿ ಅಭಿಯೋಜಕರಿಗೆ ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು).

ಪಾಟೀ ಸವಾಲು ಮಾನ್ಯ ಸಾರ್ವಜನಿಕ ಅಭಿಯೋಜಕರಿಂದಃ-

2. ದಿನಾಂಕ 24.02.2024 ರಂದು ರಾತ್ರಿ 08 ಗಂಟೆಗೆ ನಾನು, ಚಾಸಾ.6, 10 ಹಾಗೂ 12 ಎಲ್ಲರೂ ಪೆದ್ದಮ್ಮವ್ವ ದೇವಸ್ಥಾನದ ಹತ್ತಿರ ಇದ್ದಾಗ, ರಾತ್ರಿ 09 ಗಂಟೆಗೆ ನ್ಯಾಯಾಲಯದ

ಮುಂದೆ ಇರುವ 1 ರಿಂದ 5 ನೇ ಆರೋಪಿತರು ಎರಡು ಮೋಟಾರ್ ಸೈಕಲ್ ಮೇಲೆ ಅಲ್ಲಿಗೆ ಬಂದಿದ್ದರು ಎಂದರೆ ಸರಿಯಲ್ಲ. ಒಂದು ಮೋಟಾರ್ ಸೈಕಲ್ ನಲ್ಲಿ ಹಮಾಲಿ ನಾಗರಾಜನ ಮಗ ಬಸವರಾಜ-1 ನೇ ಆರೋಪಿ ಹಾಗು ಅವನ ಸ್ನೇಹಿತನಾದ ರಾಜು-3 ನೇ ಆರೋಪಿ ಬಂದಿದ್ದರು, ಇನ್ನೊಂದು ಮೊಟಾರ್ ಸೈಕಲ್ ನಲ್ಲಿ 2, 4 ಹಾಗು 5 ನೇ ಆರೋಪಿತರು ಬಂದಿದ್ದರು ಎಂದರೆ ಸರಿಯಲ್ಲ.

3. ಚಾಸಾ-1 ಇವರ ಮಗಳು ಪಾರ್ವತಿ ಇವಳನ್ನು 1 ಹಾಗು 3 ನೇ ಆರೋಪಿತರು ತಾವು ತಂದಿದ್ದ ಮೋಟಾರ್ ಸೈಕಲ್ ನ ಮಧ್ಯದಲ್ಲಿ ಬಲವಂತವಾಗಿ ಕೂಡಿಸಿಕೊಂಡು ವೇಗವಾಗಿ ಬೈಕನ್ನು ಓಡಿಸಿಕೊಂಡು ಹೋದರು, ಅವರ ಹಿಂದೆಯೇ 2, 4 ಹಾಗು 5 ನೇ ಆರೋಪಿತರು ತಾವು ಮೊಟಾರ್ ಸೈಕಲ್ ನಲ್ಲಿ ಹೋದರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಾನು ಚಾಸಾ-10 ರಿಂದ 12 ಎಲ್ಲರೂ ಏ ಏ ಎಂದು ಕೂಗುವಷ್ಟರಲ್ಲಿ ಅವರು ಬೈಕನ್ನು ವೇಗವಾಗಿ ಓಡಿಸಿಕೊಂಡು ಹೋದರು ಎಂದರೆ ಸರಿಯಲ್ಲ. ಸದರಿ ವಾಹನ ಹಿರೋ ಹೋಂಡಾ ಸ್ಪೆಂಡರ್ ಪ್ಲಸ್ ಸಿಲ್ವರ್ ಕಲರ್ ಬೈಕ್ ನಂಬರ್ ಕೆ.ಎ-34/ಇಜೆ- 4812 ಹಾಗು ಹಿರೋ ಹೋಂಡಾ ಸ್ಪೆಂಡರ್ ಪ್ಲಸ್ ಬ್ಲಾಕ್ ಕಲರ್ ಬೈಕ್ ನಂಬರ್ ಕೆಎ-34/ಜೆ 0292 ಎಂದು ಇದ್ದವು ಎಂದರೆ ಸರಿಯಲ್ಲ.

4. ಸ್ವಲ್ಪ ಹೊತ್ತಿನಲ್ಲಿ ಚಾಸಾ-1 ಇವರು ಅಲ್ಲಿಗೆ ಬಂದು ತಮ್ಮ ಮಗಳ ಬಗ್ಗೆ ವಿಚಾರಿಸಲು ಆಗ ನಾವೆಲ್ಲರೂ ಬಸವರಾಜ ಇವರು ಅವರ ಮಗಳನ್ನು ಕರೆದುಕೊಂಡ ಹೋದ ಬಗ್ಗೆ ಹೇಳಿದ್ದೆ ಎಂದರೆ ಸರಿಯಲ್ಲ. 1 ನೇ ಆರೋಪಿ ಬಸವರಾಜ ಪಾರ್ವತಿ ಇವಳನ್ನು ಪ್ರೀತಿಸುತ್ತಿದ್ದ ಅವಳಿಗೆ ಮದುವೆಯಾವುವುದಾದರೆ ತನ್ನನ್ನೇ ಮದುವೆಯಾಗು ಬೇಲರೆ ಯಾರನ್ನಾದರು ಮದುವೆಯಾದರೇ ನೀನು ಸತ್ತುಹೋಗು ಎಂದು ದುಷ್ಪ್ರೇರಣೆ ಮಾಡಿದ್ದರಿಂದ ಪಾರ್ವತಿ ಇವಳು ಮರ್ಯಾದೆಯ ಪ್ರಶ್ನೆ ಎಂದು ಮನನೊಂದು ದಿನಾಂಕ 24.02.2024 ರಂದು ಸಂಜೆ 04.45 ಗಂಟೆಗೆ ಸ್ನಾನದ ಕೋಣೆಯಲ್ಲಿ ಸೀಮೆಎಣ್ಣೆಯನ್ನು ಮೈ ಮೇಲೆ ಸುರಿದುಕೊಂಡು ಬೆಂಕಿ ಹಚ್ಚಿ ಆತಹತ್ಯೆ ಮಾಡಿಕೊಂಡಿರುತ್ತಾರೆ ಎಂದು ತಿಳಿದಿರುತ್ತದೆ ಎಂದು ಈಗ ಓದಿ ಹೇಳಲಾದ ನಿಪಿ-18 ರಂತೆ ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ.

**5.** ನಾನು ದಿಃ**29.02.2024** ರಂದು ಪೋಲೀಸರ ಮುಂದೆ ನಿಪಿ.**18** ರಂತೆ ಹೇಳಿಕೆ ನೀಡಿದ್ದರೂ ಕೂಡ ಆರೋಪಿತರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು **1** ಹಾಗು **3** ನೇ ಆರೋಪಿತರ ಪರವಾಗಿ ಶ್ರೀ ಎಮ್.ಎ.ಬಿ ವಕೀಲರಿಂದ ಮತ್ತು **2, 4** ಹಾಗೂ **5** ಪರವಾಗಿ ಶ್ರೀ ಬಿ ವಿಬಿ ವಕೀಲರಿಂದಃ</u>

ಶ್ರೀ ಎಮ್.ಎ.ಬಿ ವಕೀಲರು ಹಾಗೂ ಶ್ರೀ.ಬಿ.ವಿ.ಬಿ ವಕೀಲರು ತಮ್ಮ ಪರವಾಗಿ ಪಾಟೀಸವಾಲು ಇರುವುದಿಲ್ಲ ಎಂದು ಹೇಳುತ್ತಾರೆ.

ಮರುವಿಚಾರಣೆಃ-

ಇಲ್ಲ.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ. ಸರಿ ಇದೆ.

**C/c, 2** ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬಳ್ಳಾರಿ.